ಕೆ.ಎಸ್.ಆರ್.ಪಿ. ಯಲ್ಲಿ ಹಣದ ದುರುಪಯೋಗ

ಶ್ರೀ ಲಕ್ಕಪ್ಪ (ಚಿಕ್ಕನಾಯಕನಹಳ್ಳಿ).—ಮಾನ್ಯ ಗೃಹ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದ ವಿಶೇಷ ಪೋಲೀಸ್ ಪಡೆಯ ಬೆಂಗಳೂರು ವಿಭಾಗದಲ್ಲಿ ೧೯೮೨–೮೩, ೮೩–೮೪, ಮತ್ತು ೮೪–೮೫ನೇ ಸಾಲುಗಳ ಆಡಿಟ್ ವರದಿಯ ಮೇರೆಗೆ ಸುಮಾರು ೧.೪೦ ಲಕ್ಷರೂ.ಗಳು ದುರುಪಯೋಗವಾಗಿರುವುದು ಸರಕಾರದವರ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಮೇಲ್ಕಂಡ ಹಣವನ್ನು ದುರುಪಯೋಗ ಪಡಿಸಿಕೊಂಡಿರುವವರಾರು ಎಂಬ ಬಗ್ಗೆ ತನಿಖೆ ನಡೆಸಲಾಗಿದಿಯೆ ?

ಇ) ಮೇಲ್ಕಂಡ ಕಚೇರಿಯ ನಗದಿ ಗುಮಾಸ್ತೆಯೊಬ್ಬರನ್ನು ಅಮಾನತ್ತಿನಲ್ಲಿಟ್ಟಿರುವುದು ನಿಜವೆ, ಮತ್ತು ನಗದಿ ಗುಮಾಸ್ತೆಗೂ ಮೇಲ್ಕಂಡ ಹಣ ದುರುಪಯೋಗಕ್ಕೂ ಸಂಬಂಧ ಏನಾದರೂ ಇದೆಯೆ ಹಾಗಿದ್ದಲ್ಲಿ, ಆ ಬಗ್ಗೆ ಕೈಗೊಂಡ ಕ್ರಮವೇನು ?

ಶ್ರೀ ಆರ್. ಎಲ್. ಜಾಲಪ್ಪ (ಗೃಹ ಮಂತ್ರಿಗಳು).—

ಅ) ಕಮಾಂಡೆಂಟ್, ವಿಶೇಷ ಪಡೆ, ಕರ್ನಾಟಕ ರಾಜ್ಯ ವಿಶೇಷ ಪೋಲೀಸ್, ಬೆಂಗಳೂರು, ಅವರ ಕಚೇರಿಯ ೧೯೮೩–೮೪ ಮತ್ತು ೧೯೮೪–೮೫ನೇ ಸಾಲಿನ ಲೆಕ್ಕ ಪರಿಶೋಧನೆಯ ಸಮಯದಲ್ಲಿ ಸುಮಾರು ೯೦,೭೦೦ ರೂಪಾಯಿಯನ್ನು ತಾತ್ಕಾಲಿಕವಾಗಿ ದುರುಪಯೋಗಿಸಿರುವುದು ತಿಳಿದು ಬಂದಿದೆ.

ಆ) ಆ ಸಮಯದಲ್ಲಿ ನಗದು ಗುಮಾಸ್ತರಾಗಿದ್ದ ಶ್ರೀ ಎಂ. ವಿ. ನಾರಾಯಣ ಮೂರ್ತಿಯವರ ತಾತ್ಕಾಲಿಕವಾಗಿ ಹಣ ದುರುಪಯೋಗದ ವಿಷಯದಲ್ಲಿ ಮೇಲ್ನೋಟಕ್ಕೆ ತಪ್ಪಿಸ್ಥರೆಂದು ತಿಳಿದು ಬಂದಿದೆ.

ಇ) ಹೌದು ದುರ್ವರ್ತನೆಯ ಆರೋಪದ ಬಗ್ಗೆ ಇಲಾಖಾ ವಿಚಾರಣೆಯನ್ನು ಬಾಕಿ ಇರಿಸಿ, ಶ್ರೀ ನಾರಾಯಣಮೂರ್ತಿಯವರನ್ನು ದಿನಾಂಕ ೨೬–೭–೮೫ರಂದು ಅಮಾನತ್ತಿನಲ್ಲಿ ಇಡಲಾಯಿತು, ನಿಯಮ ೧೧ ಕೆಸಿಎಸ್ಆರ್ (ಸಿಸಿಎ) ನಿಯಮಗಳು ೧೯೫೭ರ ಪ್ರಕಾರ ಇಲಾಖಾ ವಿಚಾರಣೆಯನ್ನು ಇವರ ವಿರುದ್ಧ ತೆಗೆದುಕೊಳ್ಳಲಾಗಿದೆ. ಇಲಾಖಾ ವಿಚಾರಣಾಧಿಕಾರಿಗಳಾದ ಒಂದನೇ ಪಡೆ, ಕಮಾಂಡೆಂಟರು ದೋಷಾರೋಪಣ ಪತ್ರವನ್ನು ದಿನಾಂಕ ೭–೫–೮೭ರಂದು ಅಪಾದಿತರಿಗೆ ಕೊಡಲಾಗಿದ್ದು ಇಲಾಖಾ ವಿಚಾರಣೆಯು ಪ್ರಗತಿಯಲ್ಲಿದೆ.

ಶ್ರೀ ಬಿ. ಲಕ್ಕಪ್ಪ.—೯೦,೭೦೦ ರೂಪಾಯಿಗಳು ದುರುಪಯೋಗವಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಒಪ್ಪಿಕೊಂಡಿದ್ದಾರೆ. ಇದರಲ್ಲಿ ಡಿ.ಜಿ.ಪಿ., ಐ.ಜಿ.ಪಿ, ಡಿ.ಐ.ಜಿ. ಈ ಎಲ್ಲಾ ಅಧಿಕಾರಿಗಳೂ ವಿಶೇಷ ವಿಶೇಷ ಪೋಲೀಸ್ ಪಡೆಯನ್ನು ತನಿಖೆ ನಡೆಸಿದ್ದಾರೆ. ಅವರು ತನಿಖೆ ನಡೆಸುವಂತಹ ಕಾಲದಲ್ಲಿ ಹಣ ದುರುಪಯೋಗವಾಗಿರುವುದು ಬೆಳಕಿಗೆ ಬಾರದೇ ಇರುವುದಕ್ಕೆ ಕಾರಣವೇನು? ಅಧಿಕಾರಿಗಳನ್ನು ಮುಚ್ಚಿಡಬೇಕೆಂಬ ದುರುದ್ದೇಶ ಇತ್ತೆ. ನಂತರ ಮಾನ್ಯ ಮಂತ್ರಿಗಳು ವಿಚಾರಣೆಗಾಗಿ ನೇಮಕ ಮಾಡಲಾಗಿದೆ ಎಂದು ಹೇಳಿದ್ದಾರೆ. ಈ ವಿಚಾರಣೆ ಯಾರಿಂದ ನಡೆಯುತ್ತಿದೆ? ಸಿ.ಬಿ.ಐ. ನವರಿಂದ ನಡೆಯುತ್ತಿದೆಯೇ ಮತ್ತೆ ಇನ್ಯಾರಿಂದ ನಡೆಯುತ್ತಿದೆ? ೬ ತಿಂಗಳಾದರೂ ವಿಚಾರಣೆ ನಡೆಯುತ್ತಿಲ್ಲ. ಆದ್ದರಿಂದ ಎಷ್ಟು ದಿವಸಗಳಲ್ಲಿ ಈ ವಿಚಾರಣೆ ಮುಗಿಯುತ್ತದೆ?

ಶ್ರೀ ಆರ್. ಎಲ್. ಜಾಲಪ್ಪ.—ವಿಚಾರಣಾಧಿಕಾರಿಯನ್ನಾಗಿ ಒಂದನೇ ಪಡೆಯ ಕಮಾಂಡರನ್ನು ನಾವು ನೇಮಿಸಿದ್ದೇವೆ. ಅವರು ಸಂಬಂಧಪಟ್ಟವರಿಗೆ ನೋಟೀಸ್ ಕೂಡ ಕೊಟ್ಟಿದ್ದಾರೆ. ಸಾಧ್ಯವಾದಷ್ಟು ಬೇಗ ಮುಗಿಸುವುದಕ್ಕೆ ಹೇಳುತ್ತೇನೆ. ಇದರಲ್ಲಿ ನನಗೂ ಕೂಡ ಅಷ್ಟೊಂದು ಸಮಾಧಾನ ಇಲ್ಲ. ಬಹಳ ದಿವಸಗಳಾಗಿವೆ. ಈ ಒಂದು ಹಳೆಯ ಸಿಸ್ಟಂನ್ನೇ ಬದಲಾವಣೆ ಮಾಡಬೇಕೆಂದು ಯೋಚನೆ ಮಾಡುತ್ತಿದ್ದೇವೆ. ಯಾವುದೇ ವಿಚಾರದಲ್ಲಾಗಲಿ, ಒಬ್ಬ ಅಧಿಕಾರಿಯನ್ನು ಅಮಾನತ್ತಿನಲ್ಲಿಟ್ಟ ಮೇಲೆ ೩ ತಿಂಗಳೊಳಗೆ ವಿಚಾರಣೆ ಪೂರ್ತಿಯಾಗದಿದ್ದರೆ, ಅಂತಹ ವಿಚಾರಣಾಧಿಕಾರಿಗಳ ಮೇಲೆ ಕ್ರಮವನ್ನು ಏಕೆ ಕೈಗೊಳ್ಳಬಾರದು ಎಂಬ ಅಭಿಪ್ರಾಯ ಕೂಡ ಬಂದಿದೆ. ಅದರ ಬಗ್ಗೆಯೂ ಪರಿಶೀಲನೆ ಮಾಡುತ್ತಿದ್ದೇವೆ. ಮತ್ತೆ ಡಿ.ಜಿ.ಪಿ., ಐ.ಜಿ.ಪಿ.ಡಿಐಜಿ. ಯವರು ತನಿಖೆ ಮಾಡು

ವಾಗ ಅವರು ಲೆಕ್ಕಗಳನ್ನು ನೋಡುವುದಿಲ್ಲ. ಡ್ರಸ್ಸನ್ನು ಹೇಗೆ ಇಟ್ಟುಕೊಂಡಿದ್ದಾರೆ. ಡಿಸಿಪ್ಲೀನನ್ನು ಸರಿಯಾಗಿ ಮೇಂಟೇನ್ ಮಾಡಿದ್ದಾರೆಯೇ ಗನ್‌ಗಳನ್ನು ಸರಿಯಾಗಿ ಕ್ಲೀನ್ ಮಾಡಿ ಇಟ್ಟುಕೊಂಡಿದ್ದಾರೆಯೇ ಎಂಬುದನ್ನು ನೋಡುತ್ತಾರೆ. ಹಣದ ಲೆಕ್ಕಗಳನ್ನು ಅವರು ನೋಡುವುದಿಲ್ಲ. ಅದನ್ನು ನೋಡುವವರು ಆಡಿಟರ್ಸ್. ಆಡಿಟರ್ಸ್ ನೋಡಿದಾಗ ಇದು ಬೆಳಕಿಗೆ ಬಂದಿದೆ. ಆದ್ದರಿಂದ ಯಾವುದೇ ಅಧಿಕಾರಿಗಳನ್ನು ಮುಚ್ಚಿಡಬೇಕೆಂಬ ಅಭಿಪ್ರಾಯ ಹೊಂದಿಲ್ಲ.

ಶ್ರೀ ಬಿ. ಲಕ್ಕಪ್ಪ.—ಅಧಿಕಾರಿಗಳು ತಪಾಸಣೆ ಮಾಡಿದಾಗ ಬೆಳಕಿಗೆ ಬಾರದೆ ಮುಚ್ಚಿದ್ದಾರೆ. ಇದರ ಬಗ್ಗೆ ಸಿ.ಬಿ.ಐ. ತನಿಖೆಯಾದರೆ ಎಲ್ಲಾ ಬೆಳಕಿಗೆ ಬರುತ್ತದೆ. ಇದನ್ನು ಮುಚ್ಚಿಟ್ಟಂತಹ ಅಧಿಕಾರಿಗಳು ಯಾರು ಇದ್ದಾರೋ ಅವರ ಮೇಲೆ ಏನು ಕ್ರಮ ತೆಗೆದುಕೊಳ್ಳುತ್ತೀರಿ?

ಶ್ರೀ ಆರ್. ಎಲ್. ಜಾಲಪ್ಪ.—ಅಧಿಕಾರಿಗಳು ಮುಚ್ಚಿದ್ದಾರೆ ಎಂಬುದಾಗಿ ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಅದನ್ನು ಒಪ್ಪಿಕೊಳ್ಳುವುದಕ್ಕೆ ನಾನು ತಯಾರಿಲ್ಲ.

ಶ್ರೀ ಬಿ. ಲಕ್ಕಪ್ಪ.—ಹಣ ದುರುಪಯೋಗವಾಗಿದೆ.

ಶ್ರೀ ಆರ್. ಎಲ್. ಜಾಲಪ್ಪ.—ಹಣ ದುರುಪಯೋಗವಾಗಿರುವುದು ಬೆಳಕಿಗೆ ಬಂದ ಮೇಲೆ ಸಂಬಂಧಪಟ್ಟವರನ್ನು ಅಮಾನತ್ತಿನಲ್ಲಿಟ್ಟಿದ್ದೇವೆ. ವಿಚಾರಣೆ ನಡೆಯುತ್ತಿದೆ. ವಿಚಾರಣೆಯನ್ನು ಬೇಗ ಮುಗಿಸಿ ಎಂದು ಹೇಳುತ್ತೇನೆ. ೮೦ ಸಾವಿರಕ್ಕೆ ೯೦ ಸಾವಿರಕ್ಕೆಲ್ಲಾ ಸಿ.ಬಿ.ಡಿ. ಯಿಂದ ಹಾಗೂ ಸಿ.ಬಿ.ಐ ಯಿಂದ ತನಿಖೆಯನ್ನು ನಡೆಸುವುದಾದರೆ, ಅದಕ್ಕೆ ಇರುವಂತಹ ಮಹತ್ವವೇ ಹೊರಟು ಹೋಗುತ್ತದೆ. ವಿಚಾರಣೆಯನ್ನು ಬೇಗ ಮಾಡಿಸುತ್ತೇನೆ.

ಶ್ರೀ ಬಿ. ಲಕ್ಕಪ್ಪ.—೯೦,೭೦೦ ರೂಪಾಯಿಗಳನ್ನು ದುರುಪಯೋಗ ಮಾಡಿದ್ದಾರೆ ಅವರ ಮೇಲೆ ಚಾರ್ಜ್‌ಷೀಟ್‌ನ್ನು ಏಕೆ ಹಾಕಿದಾರದು?

ಶ್ರೀ ಆರ್. ಎಲ್. ಜಾಲಪ್ಪ.—ಹಾಗೆ ಆಗುವುದಿಲ್ಲ. ಸಿ.ಸಿ.ಎ. ರೂಲ್ಸ್ ಪ್ರಕಾರ ಮೊದಲು ಇಲಾಖಾ ವಿಚಾರಣೆಯನ್ನು ಮಾಡಬೇಕಾಗುತ್ತದೆ ಆ ವಿಚಾರಣೆಯ ವರದಿ ಬಂದ ಮೇಲೆ ತಪ್ಪಿತಸ್ಥರ ಮೇಲೆ ಕ್ರಿಮಿನಲ್ ಕೇಸನ್ನು ಹಾಕುತ್ತೇವೆ.

ಆಹಾರ ಧಾನ್ಯಗಳ ಸರಬರಾಜು

೩೭೬. ಶ್ರೀ ಎಂ. ವಿ. ಗುತ್ತೇದಾರ (ಅಫಜಲ್‌ಪುರ) ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಆಹಾರಧಾನ್ಯ ಸರಬರಾಜು ಮಾಡಲು ಬಹಳಷ್ಟು ಖಾಸಗಿ ಸಂಸ್ಥೆಗಳಿಗೆ ಪರವಾನಗಿ ಕೊಟ್ಟಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

ಆ) ಸರ್ಕಾರದ ವತಿಯಿಂದ ನಡೆಯುತ್ತಿರುವ ಅನೇಕ ತಾಲೂಕಿನ ಹಟ್ಟಿವಳಿ ಮಾರಾಟ ಸಂಘಗಳು ಪ್ರತಿಯೊಂದು ತಾಲೂಕಿನಲ್ಲೂ ಇರುವಾಗ ಖಾಸಗೀ ಸಂಸ್ಥೆಗಳಿಗೆ ಆಹಾರಧಾನ್ಯ ಸರಬರಾಜು ಮಾಡಲು ಪರವಾನಿಗೆ ನೀಡುತ್ತಿರುವುದು ಸರಿಯೇ? ಹಾಗೂ ಇದಕ್ಕೆ ಕಾರಣವೇನು?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು)

ಅ) ರಾಜ್ಯದಲ್ಲಿ ಸಗಟು ಮಾರಾಟ ಪರವಾನಿಗೆಯನ್ನು ಖಾಸಗಿ ಸಂಸ್ಥೆಗಳಿಗೆ ಕೊಟ್ಟಿರುವುದಿಲ್ಲ.

ಆ) ತಾಲೂಕು ಹಟ್ಟಿವಳಿ ಮಾರಾಟ ಸಂಘಗಳು, ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಬಿಟ್ಟು ಖಾಸಗಿ ಸಂಸ್ಥೆಗಳಿಗೆ ಆಹಾರಧಾನ್ಯ ಸರಬರಾಜು ಮಾಡಲು ಯಾವುದೇ ತಾಲೂಕಿನಲ್ಲಿ ಸಗಟು ಪರವಾನಿಗೆ ನೀಡಿಲ್ಲ

ಶ್ರೀ ಎಂ. ವಿ. ಗುತ್ತೇದಾರ್.—ಅಧ್ಯಕ್ಷರೇ, ಮಂತ್ರಿಗಳಿಗೆ ಅಧಿಕಾರಿಗಳು ಸರಿಯಾದ ಮಾಹಿತಿಯನ್ನು ಕೊಟ್ಟಿಲ್ಲವೆಂದು ಕಾಣಿಸುತ್ತದೆ. ಅನೇಕ ಸಂಸ್ಥೆಗಳು ಖಾಸಗಿ ಸಂಸ್ಥೆಗಳ ಮುಖಾಂತರ ಅಫ್ಜಲ್‌ಪುರ ತಾಲೂಕಿನಲ್ಲಿ ಆಹಾರ ಧಾನ್ಯಗಳನ್ನು ಸರಬರಾಜು ಮಾಡುತ್ತಿವೆ. ಖಾಸಗಿ ಸಂಘಗಳ